ಅಧ್ಯಕ್ಷರು: ಮಾನ್ಯ ಮಂತ್ರಿಗಳು ಇಲ್ಲ. ಉತ್ತರ ಕೊಡಿಸುತ್ತೇನೆ.

ವಿಷಯ: (iii) ಕೊಳ್ಳೇಗಾಲ ತಾಲ್ಲೂಕು ಬಂಡಳ್ಳಿಯಲ್ಲಿ ಪೊಲೀಸರ ಗೋಲಿಬಾರಿನಿಂದ ಮೃತನಾದ ನಂಗಪ್ಪ ಎಂಬುವರ ವಿಚಾರದಲ್ಲಿ ನ್ಯಾಯಾಂಗ ತನಿಖೆಗೆ ಆಜ್ಞೆ ಹೊರಡಿಸುವ ಬಗ್ಗೆ.

ಶ್ರೀ ಎಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕೊಳ್ಳೇಗಾಲ ತಾಲ್ಲೂಕು ಬಂಡಳ್ಳಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹಾರಿಸಿದ ಗೋಲಿಬಾರ್‌ನಿಂದ ಶ್ರೀ ನಾಗಪ್ಪ ಎನ್ನುವವರು ಮೃತ ಪಟ್ಟಿರುವ ವಿಚಾರ ತಮಗೆ ಗೊತ್ತಿದೆ. ಈ ಸಂದರ್ಭದಲ್ಲಿ ನಾನು, ಶ್ರೀ ಭೈರೇಗೌಡರು ಮತ್ತು ಕೃಷ್ಣ ಮೂರ್ತಿಯವರು ಆ ಸ್ಥಳದಲ್ಲಿ ಧರಣಿ ಮಾಡಿ ಈ ಬಗ್ಗೆ ನ್ಯಾಯಾಂಗ ತನಿಖೆ ಆಗುವವರೆಗೂ ನಾವು ಆ ಶವವನ್ನು ತೆಗೆಯುವುದಿಲ್ಲವೆಂದು ಹೇಳಿ ಪ್ರತಿಭಟನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಭೈರೇಗೌಡರು ಇಡೀ ರಾತ್ರಿ ಆ ಶವದ ಜೊತೆಯಲ್ಲಿ ಮಲಗಿದ್ದು ಮಾರನೇ ದಿನ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿಗೆ ಬಂದು ಒಂದು ಶಾಂತಿ ಸಭೆಯನ್ನು ಮಾಡಿ ನ್ಯಾಯಾಂಗ ತನಿಖೆಯನ್ನು ನಡೆಸುವುದಕ್ಕೆ ನಾನು ವ್ಯವಸ್ಥೆಯನ್ನು ಮಾಡುತ್ತೇನೆಂದು ಮತ್ತು ತಪ್ಪಿತಸ್ಥರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ಒಂದು ಆಶ್ವಾಸನೆಯನ್ನು ಕೊಟ್ಟರು, ಅನಂತರ ಆ ಶವವನ್ನು ಅಂತ್ಯ ಸಂಸ್ಕಾರಕ್ಕೆ ತೆಗೆದುಕೊಂಡು ಹೋದರು. ಈ ಒಂದು ವಿಚಾರದಲ್ಲಿ ಸರ್ಕಾರ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ನಮಗೆ ಮಾಹಿತಿ ಇಲ್ಲ. ಈ ವಿಚಾರದಲ್ಲಿ ನ್ಯಾಯಾಂಗ ತನಿಖೆಯನ್ನು ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಈ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಯಾವಾಗ ಚಿಚ್ಛೆ ಮಾಡುತ್ತದೆ ಸರ್ಕಾರ ಎನ್ನುವುದನ್ನು ತಿಳಿಸಬೇಕೆಂದು ನಾನು ಹೇಳಿಕೊಳ್ಳುತ್ತೇನೆ.

+ ಶ್ರೀ ಸಿ ಭೈರೇಗೌಡ (ಚೇಮಂಗಲ್): ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದ ಮೇಲೆ ಒಂದು ಹೊಸ ಸಂಸ್ಕೃತಿ ಪ್ರಾರಂಭವಾಗಿದೆ. ಅದೇನೆಂದರೆ ಪೊಲೀಸಿನವರು, ಸರ್ಕಾರಿ ಅಧಿಕಾರಿಗಳು ಇವರೆಲ್ಲರೂ ಕೂಡ ಕಾಂಗ್ರೇಸ್ ಮುಖಂಡರ ಮನೆಗಳನ್ನು ಕಾಯುವಂತಹ ಕಾವಲುಗಾರರು ಆಗಿದ್ದಾರೆ. ಇದು ಒಂದೇ ಕಡೆ ಅಲ್ಲ. ರಾಜ್ಯದ ಅನೇಕ ಕಡೆ ಈ ರೀತಿಯಾಗಿ ನಡೆಯುತ್ತಾ ಇರುತಕ್ಕಂಥಾ ಉದಾಹರಣೆಗಳು ಇವೆ. ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುತಕ್ಕಂಥಾದ್ದು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆ. ಸುಮಾರು ಎರಡು ವರ್ಷ ಆಗಿದೆ ಈ ಕಟ್ಟಡ ಕಟ್ಟಿಸಿ ಮಾನ್ಯ ಮಲಕರೆಡ್ಡಿಯವರಿಗೂ ಕೂಡ ಗೊತ್ತಿರಬಹುದು. ಅದನ್ನು ಉದ್ಘಾಟನೆ ಮಾಡುವ ಕಾರ್ಯಕ್ರಮವೂಸ್ಕರ ನಿಲ್ಲಿಸಿಕೊಂಡಿದ್ದರು, ಆ ಕಟ್ಟಡ ಉದ್ಘಾಟನೆ ಆಗಿರಲಿಲ್ಲ. ಇಷ್ಟು ಪೂರ್ತಿ ಖರ್ಚು ಮಾಡಿ ಕಟ್ಟಡ ಕಟ್ಟಿ ಈ ಕಟ್ಟಡ ಹಾಗೆ ಇದೆಯಲ್ಲ ಅಂತ ಹೇಳಿ ಜಿಲ್ಲಾ ವೈದ್ಯಾಧಿಕಾರಿಗಳು ಅಲ್ಲಿನ ವೈದ್ಯರಿಗೆ ಹೇಳುತ್ತಾರೆ. ಆ ಕಟ್ಟಡದ ಬೀಗ ತೆಗೆದು ನೀವು ಅಲ್ಲಿ ಕೆಲಸ ಮಾಡಿ ಅಂತ ಹೇಳುತ್ತಾರೆ. ಈ ರೀತಿ ಹೇಳಿದಂತಹ ಸಂದರ್ಭದಲ್ಲಿ ಅಲ್ಲಿನ ವೈದ್ಯರು ಆ ಗ್ರಾಮದಲ್ಲಿ ಈ ಆಸ್ಪತ್ರೆ ಕಟ್ಟಡ ಕಟ್ಟಲು ಜಾಗ ಇರಲಿಲ್ಲ ಸ್ವಂತ ಜಮೀನನ್ನು ಒಬ್ಬರು ದಾನಿಗಳು ದಾನ ಮಾಡುತ್ತಾರೆ. ಅವರನ್ನು ಕರೆದು ಗ್ರಾಮ ಪಂಚಾಯಿತಿಯವರನ್ನು ಕರೆದು ಆ ಕಟ್ಟಡದ ಬೀಗ ತೆಗೆದು ಅಲ್ಲಿ ಕೆಲಸ ಮಾಡುವುದಕ್ಕೆ ಆ ವೈದ್ಯರು ಪ್ರಾರಂಭ ಮಾಡುತ್ತಾರೆ.

ಇಷ್ಟೇ ಅಲ್ಲಿ ಅವರು ಮಾಡಿದಂತಹ ಅಪರಾಧ. ಅವರು ಜಮೀನು ದಾನ ಕೊಟ್ಟಿದ್ದು ಮಹಾ ಅಪರಾಧ. ಕಟ್ಟಡ ಕಟ್ಟಿ ಎರಡು ವರ್ಷ ಆಗಿತ್ತು. ಆ ಕಟ್ಟಡದ ಬೀಗ ತೆಗೆದು ಕೆಲಸ ಮಾಡುವಂತಾದ್ದಕ್ಕೆ ಅವರು ಅವಕಾಶ ಮಾಡಿಕೊಟ್ಟಿದ್ದು ಮಹಾ ಅಪರಾಧ. ಈ ಅಪರಾಧಕ್ಕೆ ಶಿಕ್ಷೆ ಏನೆಂದರೆ ಅವತ್ತು ಇನ್ನೊಂದು ಸಮಾರಂಭವನ್ನು ನಿಗದಿ ಮಾಡುತ್ತಾರೆ. ಮೊದಲು ಒಪ್ಪಂದ ಆಗಿರುವಂಥಾದ್ದು 8-1-2001ರಲ್ಲಿ. ಈ ಕಟ್ಟಡದ ಪ್ರಾರಂಭೋತ್ಸವ ನಡೆಯುತ್ತದೆ. ಇದಾದ ಮೇಲೆ 19-1-2001ರಂದು ಈ ಕಟ್ಟಡ ಉದ್ಘಾಟನೆ ಆಗಬೇಕೆಂದು ಒಂದು ಪ್ರಕಟಣೆ ಹೊರಡಿಸುತ್ತಾರೆ. ಆ ಪ್ರಕಟಣೆಯಲ್ಲಿ ಇನ್ನೂ ಯಾರ್ಯಾರೋ ಹೆಸರನ್ನು ಸೇರಿಸಿರುತ್ತಾರೆ. ಆದರೆ ಆ ಕಟ್ಟಡಕ್ಕೆ ದಾನವಾಗಿ ಯಾರು ಜಮೀನು ಕೊಟ್ಟಿದ್ದರು ಅವರ ಹೆಸರು ಇಲ್ಲ. ಆ ಗ್ರಾಮ ಪಂಚಾಯತಿಯವರ ಹೆಸರು ಇಲ್ಲ. ಅವರನ್ನು ಕರೆಯದೇ ಆ ಸಮಾರಂಭ ಮಾಡಲು ಹೋಗುತ್ತಾರೆ. ಸ್ವಾಭಾವಿಕವಾಗಿ ಅಲ್ಲಿರತಕ್ಕಂಥ ಹಳ್ಳಿಯವರಿಗೆ ಸಿಟ್ಟುಬರುತ್ತದೆ. ದಾನ ಕೊಟ್ಟಿರತಕ್ಕಂಥವರು ಇಲ್ಲ. ಈ ಕಟ್ಟಡವನ್ನು ಕಟ್ಟಲು ಕಾರಣಕರ್ತರಾಗಿರತಕ್ಕಂಥವರು ಇಲ್ಲ. ಇದಕ್ಕೆ ಏನೂ ಸಂಬಂಧವಿಲ್ಲದೇ ಇರತಕ್ಕಂಥವರು ಬಂದು ಅಲ್ಲಿ ಕಟ್ಟಡದ ಉದ್ಘಾಟನೆ ಮಾಡುತ್ತಾರೆಂದರೆ ಹೇಗೆ? ಆ ಹಳ್ಳಿಯಲ್ಲಿ ಸುಮಾರು 6-7 ಸಾವಿರ ಜನಸಂಖ್ಯೆ ಇರತಕ್ಕಂಥ ಹಳ್ಳಿ. ಆಗ ಇಡೀ ಗ್ರಾಮಸ್ಥರೆಲ್ಲರೂ ಒಂದಾಗುತ್ತಾರೆ. ಈ ಕಟ್ಟಡವನ್ನು ಉದ್ಘಾಟನೆ ಮಾಡಲು ಅವಕಾಶ ಇಲ್ಲ, ಕಾರಣವೇನೆಂದರೆ ಈ ಕಟ್ಟಡಕ್ಕೆ ದಾನ ಕೊಟ್ಟಿರತಕ್ಕಂಥಾ ಜಮೀನಿನ ಮಾಲೀಕರನ್ನು ತಾವು ಕರೆದಿಲ್ಲ, ಮತ್ತು ಈ ಕಟ್ಟಡ ಈಗಾಗಲೇ ಉದ್ಘಾಟನೆ ಆಗಿದೆ ಎನ್ನತಕ್ಕಂಥಾ ಮಾತನ್ನು ಹೇಳುತ್ತಾರೆ. ಈ ಸಮಾರಂಭವನ್ನು ಅವೊತ್ತು ಆ ಕ್ಷೇತ್ರದ ಶಾಸಕರು ವ್ಯವಸ್ಥೆ ಮಾಡಿರುತ್ತಾರೆ. ಆ ಸಮಾರಂಭದಲ್ಲಿ ಸ್ಥಳೀಯ ಅಧಿಕಾರಿಗಳೆಲ್ಲರೂ ಶಾಮೀಲಾಗುತ್ತಾರೆ. ಅವರು ವಾಸ್ತವಾಂಶವನ್ನು ಬಚ್ಚಿಟ್ಟು ಸಮಾರಂಭವನ್ನು ನಿಗದಿ ಮಾಡುತ್ತಾರೆ. ಅವೊತ್ತು ಎರಡು ಸಮಾರಂಭ ನಡೆಯುತ್ತದೆ. ಬಂಡಳ್ಳಿಯಲ್ಲಿ ಒಂದು ಸಮಾರಂಭ ಅಂದರೆ ಬೆಳಿಗ್ಗೆ 11-00 ಗಂಟೆಗೆ ಒಂದು ಸಮಾರಂಭ. ಈ ಸಮಾರಂಭ ಮಧ್ಯಾಹ್ನ 2-00 ಗಂಟೆಗೆ ಇರುತ್ತದೆ. ಬೆಳಿಗ್ಗೆ ಸಮಾರಂಭದಲ್ಲಿ ಅಲ್ಲಿ ಏನೂ ಮಾಡುವುದಕ್ಕೆ ಆಗಲಿಲ್ಲ. ಪೊಲೀಸಿನವರ ಬೆಂಗಾವಲಿನಲ್ಲಿ ಹೋದರೂ ಕೂಡ ಅಲ್ಲಿ ಏನೂ ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ಇವರಿಗೆ ಯಾವ ಯಾವ ರೀತಿ ಮರ್ಯಾದೆ ಆಗಬೇಕೋ ಅದು ಆಗುತ್ತದೆ. ಆ ಸಮಾರಂಭ ಅವೊತ್ತು ರದ್ದಾಗುತ್ತದೆ. ಅದಾದ ಮೇಲೆ ಮಧ್ಯಾಹ್ನ ನಡೆಯಬೇಕಾಗಿರಕತಕ್ಕಂಥ ಕಾರ್ಯಕ್ರಮವನ್ನು ರದ್ದು ಮಾಡುತ್ತಾರೆ. ಆ ಕಾರ್ಯಕ್ರಮ ರದ್ದಾದ ಮೇಲೆ ಹಳ್ಳಿಯಲ್ಲಿರತಕ್ಕಂಥ ಜನ ನಿಶ್ಚಿಂತೆಯಿಂದ ಇದ್ದರು. ಆದರೆ ಸಾಯಂಕಾಲ 8-30 ಗಂಟೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಹೋಗುತ್ತಾರೆ. ಅಲ್ಲಿ ಅವರಿಗೆ ಏನು ಕೆಲಸ. ಆದಿನ ಸಾಯಂಕಾಲ ಬಸ್ ಸ್ಟ್ಯಾಂಡ್‌ನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ಜನ ಮತ್ತು ಅಲ್ಲಿನ ಜನ ಸಂಜೆ ಕುಳಿತು ಏನೋ ವಿಷಯ ಚರ್ಚೆ ಮಾಡುತ್ತಿದ್ದರೆ ಅವರ ಮೇಲೆ ಏಕಾಏಕಿಯಾಗಿ ಗದಾಪ್ರಹಾರ ಮಾಡತಕ್ಕಂಥ ರೀತಿಯಲ್ಲಿ ಅಲ್ಲಿರತಕ್ಕಂಥ ಸರ್ಕಲ್ ಇನ್ಸ್‌ಪೆಕ್ಟರ್ ವ್ಯವಹಾರ ನಡೆಸುತ್ತಾರೆ. ಅಲ್ಲಿ ಸಿಕ್ಕ ಸಿಕ್ಕವರನ್ನು ಚಚ್ಚಿದ್ದಾರೆ. ಮತ್ತು ಈಗಾಗಲೇ ಪ್ರಾರಂಭ ಆಗಿರತಕ್ಕಂಥ ಕಟ್ಟಡಕ್ಕೆ ಮತ್ತೆ ಉದ್ಘಾಟನೆ ಮಾಡಲು ಹಳ್ಳಿಯ ಜನ ವಿರೋಧ ಮಾಡುತ್ತಾರೆ. ಹಿಂದೆ ಉದ್ಘಾಟನೆಯಾಗಿರುವಂತಹ ಫಲಕವನ್ನು ಸರ್ಕಲ್ ಇನ್ಸ್‌ಪೆಕ್ಟರ್ ತೆಗೆಸುತ್ತಾರೆ. ಇದನ್ನು ಕಂಡ ಗ್ರಾಮಸ್ಥರು ರೇಗುತ್ತಾರೆ. ಅವರು ಕೇಳಿದ್ದು ತಪ್ಪು ಅಂತ ಹೇಳಿ ಆ ದಿನ ರಾ[illegible] ಆ ಸರ್ಕಲ್ ಇನ್ಸ್‌ಪೆಕ್ಟರ್ ರಾಕ್ಷಸನ ರೂಪ ತಾಳುತ್ತಾನೆ.

ರಾಕ್ಷಸನ ಸ್ವರೂಪ ತಾಳಿ ಫೈರ್ ಮಾಡುತ್ತಾನೆ. ಬಂದೂಕ ತೋರಿಸುತ್ತಾರೆ. ಒಬ್ಬ ಸ್ಥಳದಲ್ಲಿಯೇ ಸತ್ತ. ಇನ್ನು ಉಳಿದಿರತಕ್ಕಂಥ ಪೋಲೀಸಿನವರು ಮರಿ ರಾಕ್ಷಸರಾಗಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಹೊಡೆಯುವಂತಹ ಕೆಲಸ ನಡೆಯುತ್ತದೆ. ಇದಕ್ಕೆ ಏನು ಕಾರಣ? ಆಮೇಲೆ ಎರಡನೆಯವರು ಮೈಸೂರಿನ ಆಸ್ಪತ್ರೆಗೆ ಸೇರುತ್ತಾರೆ. ಆತನು ಕೂಡ ಸಾಯುತ್ತಾನೆ. ಮೊದಲನೆ ದಿನ ಸತ್ತಾಗ ನಾನು ಮತ್ತು ಸಿಂಧ್ಯಾರವರು ಸ್ಥಳಕ್ಕೆ ಹೋಗಿದ್ದೆವು. ಆವತ್ತು ಡಿ ಐ ಜಿ ಮತ್ತು ಉಳಿದಿರತಕ್ಕಂಥವರೆಲ್ಲಾ ಸೇರಿದಾಗ ನಾವುಇಟ್ಟ ಬೇಡಿಕೆ ಏನೆಂದರೆ ನಿರಪರಾಧಿಗಳ ಮೇಲೆ ಫೈರಿಂಗ್ ಮಾಡಿ ಸಾಯಿಸಿರತಕ್ಕಂಥಾದ್ದು. ಕೊಲೆ ಮೊಕದ್ದಮೆಯಾಗುತ್ತದೆ. ಈ ಪ್ರಕರಣವನ್ನು ನೀವು ದಾಖಲು ಮಾಡಿಕೊಳ್ಳಬೇಕೆಂಬ ದೂರನ್ನು ಮೃತರ ಹೆಂಡತಿಯು ಪೊಲೀಸರಿಗೆ ಕೊಡುತ್ತಾರೆ. ಅವರು ಕೊಟ್ಟ ದೂರನ್ನು ದಾಖಲಿಸುವುದಿಲ್ಲ. ಜಿಲ್ಲಾಧಿಕಾರಿಗಳು ಇರುತ್ತಾರೆ, ಎಸ್.ಪಿ.ಇರುತ್ತಾರೆ, ಅವರ ಸಮ್ಮುಖದಲ್ಲಿಯೇ ಈ ದೂರನ್ನು ಕೊಡುತ್ತಾರೆ. ಹೀಗಿದ್ದರೂ ದೂರನ್ನು ದಾಖಲಿಸುವುದಿಲ್ಲ. ಎರಡನೇ ಸಾವು ಆಗುತ್ತದೆ. ಆಗ ನಾನು ಕೂಡ ಸ್ಥಳಕ್ಕೆ ಹೋಗಿದ್ದೆ. ಹನೂರು ಪೊಲೀಸ್ ಸ್ಟೇಶನ್ ಎದುರು ಧರಣಿ ಮಾಡತಕ್ಕಂಥಾದ್ದು. ರಾತ್ರಿಯೆಲ್ಲಾ ನಾವುಗಳು ಅಲ್ಲೇ ಕುಳಿತಿರತಕ್ಕಂಥ ಕೆಲಸವನ್ನು ನಾವು ಮಾಡಬೇಕಾಯಿತು. ಇಂಥ ಕಾರ್ಯಕ್ಕೆ ಪ್ರತಿಭಟನೆಯನ್ನು ಸೂಚಿಸಬೇಕಾಗುತ್ತದೆ. ಮಾರನೇ ದಿವಸ ಮಧ್ಯಾಹ್ನ ರೇಶ್ಮೆ ಸಚಿವರಾದ ಮಾನ್ಯ ಶ್ರೀ ಮಹದೇಶ್ವರವರು ಬಂದರು. ಅಲ್ಲಿನ ನಾಗರೀಕರ ಬೇಡಿಕೆ ಏನಿತ್ತೆಂದರೆ, ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಮೇಲೆ ಮರ್ಡರ್ ಕೇಸನ್ನು ದಾಖಲು ಮಾಡಬೇಕೆಂಬುದಾಗಿತ್ತು. ಈ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಮೇಲೆ ಶವಸಂಸ್ಕಾರ ಕಾರ್ಯ ನಡೆಯುತ್ತದೆ. ಸಂಬಂಧಪಟ್ಟವರು ಪ್ರಕರಣದ ಕುರಿತು ನ್ಯಾಯಾಂಗ ತನಿಖೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಜನರ ಬೇಡಿಕೆಯನ್ನು ಸರಕಾರವು ಗೌರವಿಸಿದ್ದಕ್ಕೆ ನಾನು ಸಂತೋಷಪಡುತ್ತೇನೆ. ಇಲ್ಲಿ ಪ್ರಮುಖವಾಗಿರತಕ್ಕಂಥ ವಿಚಾರವೆಂದರೆ ಯಾರೇ ಒಬ್ಬ ನಾಗರೀಕನು ಇಂಥ ಸಂದರ್ಭಗಳಲ್ಲಿ ದೂರು ಕೊಟ್ಟರೆ ಅದನ್ನು ದಾಖಲು ಮಾಡಿಕೊಳ್ಳಬಾರದು ಎಂದು ಯಾವ ಕಾನೂನಿನಲ್ಲಿದೆ? ಸದನದಲ್ಲಿ ಬಹಳ ಜನ ಮಾನ್ಯ ಸದಸ್ಯರು ವಕೀಲರುಗಳಾಗಿದ್ದಾರೆ, ಮಾನ್ಯ ಸಭಾಧ್ಯಕ್ಷರು ಕೂಡ ವಕೀಲರಾಗಿದ್ದಾರೆ. ಬಲ್ಲವರು ಈ ಬಗ್ಗೆ ಹೇಳಬೇಕು. ಒಟ್ಟಿನಲ್ಲಿ ನೆಲದ ಕಾನೂನನ್ನು ಉಲ್ಲಂಘನೆ ಮಾಡುವಂಥ ಕೆಲಸವು ಸರಕಾರದಿಂದ ಆಗಿದೆ ಎಂದು ಹೇಳಬಯಸುತ್ತೇನೆ. ಇದಕ್ಕೆ ರಾಜಕೀಯ ಕಾರಣಗಳು ಕೂಡ ಇರಬಹುದು. ಒಬ್ಬ ನಾಗರೀಕನಿಗೆ ರಕ್ಷಣೆ ಕೊಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿರತಕ್ಕಂಥಾದ್ದು, ಹಾಗೆಯೇ ಯಾವ ಕಾರಣಕ್ಕಾಗಿ ದೂರನ್ನು ದಾಖಲು ಮಾಡಿಕೊಂಡಿಲ್ಲವೆಂಬುದನ್ನು ಸರಕಾರದವರು ಹೇಳಬೇಕೆಂದು ಒತ್ತಾಯ ಮಾಡುತ್ತೇನೆ. ಮೃತರಪತ್ನಿ ಕೊಟ್ಟಿರತಕ್ಕಂಥ ದೂರನ್ನು ಈಗಲೂ ಕೂಡ ದಾಖಲು ಮಾಡಿಕೊಳ್ಳಬೇಕು. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಮೂಲಕ ನಿಷ್ಕಾರಣವಾಗಿ ಎರಡು ಜೀವಗಳನ್ನು ತೆಗೆಯತಕ್ಕಂಥ ಕೆಲಸವಾಗಿದೆ, ಅಲ್ಲಿ ಯಾರಿಂದಲೂ ಯಾವ ತರಹದ ಪ್ರೋವೋಕೇಶನ್ ಇತ್ಯಾದಿಗಳು ನಡೆಯಲಿಲ್ಲ. ಅಲ್ಲಿ ಶಾಂತವಾಗಿದ್ದ ಪರಿಸ್ಥಿತಿಯಲ್ಲಿ ಇವರುಗಳು ಹೋಗಿ ಗಲಾಟೆ ಎಬ್ಬಿಸಿ ಎರಡು ಜೀವಗಳನ್ನು ತೆಗೆದುಕೊಳ್ಳತಕ್ಕಂಥ ಕೆಲಸವು ಆ ಸರ್ಕಲ್ ಇನ್ಸ್‌ಪೆಕ್ಟರ್ ಮೂಲಕ ಆಗುತ್ತದೆ. ಆ ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಇವೊತ್ತು ಮರ್ಡರ್‌ಕೇಸ್ ರಿಜಿಸ್ಟರ್ ಮಾಡತಕ್ಕಂಥಾದ್ದು ಸರಕಾರದ ಕರ್ತವ್ಯವಾಗಿದೆ. ಈ ನೆಲದ ಕಾನೂನು ಕೂಡ ಅದನ್ನೇ ಹೇಳುತ್ತದೆ.

ಇಷ್ಟೊತ್ತು ಮಾನ್ಯಮಂತ್ರಿಗಳು ಹೇಳಿರುವ ರೀತಿಯಲ್ಲಿ ಇದಕ್ಕೆ ನ್ಯಾಯಾಂಗ ತನಿಖೆ ಮಾಡಬೇಕು. ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆಂಬ ಬಗ್ಗೆ ಹೇಳಿಲ್ಲ. ಅದನ್ನು ತಿಳಿಸಬೇಕು. ಇಷ್ಟು ವಿಚಾರಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಗಡದಹಳ್ಳಿ ಗ್ರಾಮದಲ್ಲಿ ನಡೆದಂಥ ಘಟನೆಯ ಬಗ್ಗೆ ಮಾನ್ಯ ಭೈರೇಗೌಡರವರು ಮತ್ತು ಆ ಭಾಗದ ಶಾಸಕಮಿತ್ರರುಗಳವರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವನ್ನು ನಾವು ಈಗಾಗಲೇ ನ್ಯಾಯಾಂಗ ತನಿಖೆಗೆ ಮಹಿಸಿಕೊಟ್ಟಿದ್ದೇವೆ. ಮೊನ್ನೆ ಸಚಿವಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ತಾವೂನು ಇಲಾಖೆಯವರು ಚೀಫ್ ಜಸ್ಟೀಸ್‌ರವರಿಗೆ ಪತ್ರವನ್ನು ಬರೆದು ಒಬ್ಬ ಜಡ್ಜ್‌ರವರನ್ನು ನೇಮಕಾತಿ ಮಾಡಬೇಕೆಂದು ಕೇಳಿದ್ದೇವೆ. ಆದ್ದರಿಂದ ನಾವು ನ್ಯಾಯಾಂಗ ತನಿಖೆಯನ್ನು ಮಾಡುವ ಹಂತದಲ್ಲಿದ್ದಾಗ ನಾನು ಸವಿಸ್ತಾರವಾಗಿ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ಸ್‌ಪೆಕ್ಟರ್ ಕುರಿತು ಅವರು ಹೇಳಿದ್ದಾರೆ. ಇನ್ಸ್‌ಪೆಕ್ಟರ್‌ನ್ನು ನಾವು ಈಗಾಗಲೇ ಸಸ್ಪೆಂಡ್ ಮಾಡಿದ್ದೇವೆ. ಎನ್‌ಕ್ವೈರಿ ಪೆಂಡಿಂಗ್‌ನಲ್ಲಿ ಇದೆ. ಮತ್ತು ವಿಚಾರಣೆಗೆ ನಾವು ಮೂರು ತಿಂಗಳ ಅವಧಿಯನ್ನು ಕೊಟ್ಟಿದ್ದೇವೆ. ವಿಚಾರಣಾ ವರದಿಯ ಆಧಾರದ ಮೇಲೆ ಕ್ರಮ ಜರುಗಿಸುತ್ತೇವೆ. ಅಲ್ಲಿ ಆ ಸಂದರ್ಭದಲ್ಲಿ ಫೈರ್ ಮಾಡತಕ್ಕಂಥಾದ್ದರ ಅವಶ್ಯಕತೆ ಇರಲಿಲ್ಲವೆಂದು ಕಂಡು ಬಂದರೆ ಪ್ರಕರಣವನ್ನು ಮರ್ಡರ್ ಎಂದು ಪರಿಗಣಿಸಿ ಸೆಕ್ಷನ್ 302 ಮೇರೆಗೆ ಕೇಸ್ ರಿಜಿಸ್ಟರ್ ಮಾಡಲು ಖಂಡಿತವಾಗಿಯೂ ವರದಿ ಬಂದಮೇಲೆ ಅದರ ಆಧಾರದ ಮೇಲೆ ಈ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಇಲ್ಲಿ ಮುಖ್ಯವಾಗಿರತಕ್ಕಂಥ ಪ್ರಶ್ನೆ ಎತ್ತಿರತಕ್ಕಂಥಾದ್ದು, ಒಬ್ಬರು ದೂರು ಕೊಟ್ಟಮೇಲೆ, ಆಂದರೆ ಕೃತ್ಯ ನಡೆದಿದೆಯೋ ನಡೆದಿಲ್ಲವೋ ಎಂಬುದು ಅನಂತರದ ವಿಚಾರ. ಆ ಕುರಿತು ಇನ್‌ವೆಸ್ಟಿಗೇಶನ್ ಆಗಬೇಕಾಗುತ್ತದೆ. ಇನ್‌ವೆಸ್ಟಿಗೇಶನ್ ಆಗಿ ಅದು ನಿಜವೆಂದು ಕಂಡುಬಂದರೆ ಚಾರ್ಜ್‌ಶೀಟ್ ಹಾಕುತ್ತಾರೆ. ನಿಜವಾಗಿಲ್ಲವೆಂದರೆ ಅದು "ಬಿ" ರಿಪೋರ್ಟ್ ಆಗುತ್ತದೆ. ಇದು ಕಾನೂನಿನಲ್ಲಿರತಕ್ಕಂಥದ್ದು. ನಾನು ಅದನ್ನೇ ಹೇಳತಕ್ಕಂಥಾದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, When a Government servant is acting in good faith, whether he is right or wrong ಎನ್ನುವುದಕ್ಕಾಗಿ ತಾವುಗಳು ನ್ಯಾಯಾಂಗ ತನಿಖೆಯಾಗಬೇಕೆಂದು ಕೇಳಿದ್ದೀರಿ. ಆ ಜ್ಯುಡಿಶಿಯಲ್ ಪ್ರೋಬ್ಸ್ ರಿಪೋರ್ಟ್ ಬಂದ ಮೇಲೆ if he has acted contrary to rules or outside his powers, then we can register a case.

ಶ್ರೀ ಸಿ. ಭೈರೇಗೌಡ: ಸಂಬಂಧಪಟ್ಟವರು ಪೊಲೀಸ್ ಸ್ಟೇಶನ್‌ಗೆ ಹೋಗಿ ದೂರು ಕೊಟ್ಟಿದ್ದಾರೆ. ಆ ದೂರನ್ನು ರಿಜಿಸ್ಟರ್ ಮಾಡಿಕೊಳ್ಳಬೇಕು. ಈ ದೇಶದ ಯಾವುದೇ ಒಬ್ಬ ನಾಗರೀಕರು ಒಂದು ದೂರು ಕೊಟ್ಟರೆ ಅದನ್ನು ಪ್ರಥಮವಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಕಾನೂನು ಹೇಳುತ್ತದೆ. ಆ ಕೆಲಸವನ್ನು ಇಲಾಖೆಯವರು ಮಾಡಿಲ್ಲ. ಅದನ್ನು ಮಾಡಿ ಎನ್ನತಕ್ಕಂಥಾದ್ದು ನನ್ನ ಒತ್ತಾಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯವನ್ನು ಎಕ್ಸಾಮಿನ್ ಮಾಡುತ್ತೇನೆ.

ವಿಷಯ: (iv) ತೀರ್ಥಹಳ್ಳಿಯ ವಿಧಾನಸಭಾ ಕ್ಷೇತ್ರದಲ್ಲಿ ಯುಗಾದಿ ಹಬ್ಬಕ್ಕೆ ಸಕ್ಕರೆ ಬಾಚುಗಡೆ ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಹಬ್ಬಕ್ಕೆ ಸರಕಾರದವರು ಸಕ್ಕರೆಯನ್ನು ಬಿಡುಗಡೆ ಮಾಡಲಿಲ್ಲ. ನಮ್ಮ ಸಾರ್ವಜನಿಕರು ನಾವು ಹಬ್ಬಗಳಲ್ಲಿ ಸಕ್ಕರೆ ಉಪಯೋಗಿಸಬಾರದೆ ಎಂದು ಕೇಳುತ್ತಿದ್ದಾರೆ. ಹೀಗಾಗಿ ನಾವು ಸಕ್ಕರೆ ಇಲ್ಲದೆ ಹಬ್ಬ ಆಚರಿಸಬೇಕಾಯಿತು. ಸರಕಾರದವರು ಇಷ್ಟೊಂದು ದೊಡ್ಡ ಆಹಾರ ಇಲಾಖೆಯನ್ನು ಇಟ್ಟುಕೊಂಡು ನಮ್ಮ ಶಿವಮೊಗ್ಗ ಜಿಲ್ಲೆಯಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆ ಸರಬರಾಜು ಮಾಡಿಲ್ಲವೆಂದರೆ ಇದರ ಅರ್ಥ ಏನು? ಈ ಕ್ಷಣದಲ್ಲಿಯೂ ಕೂಡ ಸಕ್ಕರೆ ಸರಬರಾಜಾಗಿಲ್ಲ. ನಿಮ್ಮ ಅಧಿಕಾರಿಗಳು ಇದ್ದಾರೋ? ನಿಮ್ಮ ಇಲಾಖೆ ಇದೆಯೋ? ಪಡಿತರ ಹಂಚಿಕೆಯ ವ್ಯವಸ್ಥೆಯನ್ನು ನೋಡಿಕೊಳ್ಳುವವರು ಯಾರು?

ಪಿ.ಎಂ. 5.26

(ಶ್ರೀ ಅಂಜನಮೂರ್ತಿ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಇನಾಂದಾರ್(ಸನ್ಮಾನ್ಯ ಆಹಾರ ಮತ್ತು ಪಡಿತರ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೇ, ಫೆಬ್ರವರಿ ತಿಂಗಳವರೆಗೆ ಕೇಂದ್ರ ಸರಕಾರದವರು 20,452ಲಕ್ಷ ಮೆಟ್ರಿಕ್ ಟನ್ ಸಕ್ಕರೆಯನ್ನು ರಾಜ್ಯಕ್ಕೆ ಒದಗಿಸುತ್ತಾ ಇದ್ದರು. ಆದರೆ ಇದರ ಪ್ರಮಾಣವನ್ನು ಮಾರ್ಚ್ ತಿಂಗಳಲ್ಲಿ 8,636ಲಕ್ಷ ಮೆಟ್ರಿಕ್ ಟನ್‌ಗಳಿಗೆ ಇಳಿಸಿದ್ದಾರೆ. ಅದು ಕೂಡ 14-3-2001ಕ್ಕೆ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಅಲಾಟ್‌ಮೆಂಟ್ ಬಂದಿತ್ತು. ಶಿವಮೊಗ್ಗ ಜಿಲ್ಲೆಗೆ 395.9 ಮೆಟ್ರಿಕ್‌ಟನ್‌ಗಳನ್ನು ಅಲಾಟ್ ಮಾಡಿದ್ದೇವೆ. ಅದರಲ್ಲಿ ಭದ್ರಾವತಿ ಸಕ್ಕರೆ ಕಾರ್ಖಾನೆಯಿಂದ 164 ಮೆಟ್ರಿಕ್ ಟನ್. ಉಗಾರಖುರ್ದ ಫ್ಯಾಕ್ಟರಿಯಿಂದ 231 ಮೆಟ್ರಿಕ್‌ಟನ್‌ಗಳನ್ನು ಅಲಾಟ್‌ಮೆಂಟ್ ಮಾಡಲಾಯಿತು. ಈ ತಿಂಗಳ ಸರಬರಾಜಿನಲ್ಲಿ ಸ್ವಲ್ಪ ವಿಳಂಬವಾಗಿದೆ. ಏಕೆಂದರೆ ಮೂಲಭೂತವಾಗಿ ಅಲಾಟ್‌ಮೆಂಟ್ ನಮಗೆ ಬರಬೇಕಾದುದು ತಡವಾಗಿ ಬಂದುದರಿಂದ ಆದಷ್ಟು ಬೇಗನೆ ನಾವು ಕೊಡಲು ಆಗಲಿಲ್ಲ. ಆದರೂ ಕೂಡ ಈಗ ಕೊಡತಕ್ಕಂಥ ಅಲಾಟ್‌ಮೆಂಟ್‌ನಿಂದ ಹಸಿರುಕಾರ್ಡ್‌ದಾರರಿಗೆ ಅಥವಾ ಬಡತನರೇಖೆಗಿಂತ ಕೆಳಗೆ ಇರತಕ್ಕಂಥ ವರ್ಗದ ಕಾರ್ಡ್‌ದಾರರಿಗೆ ಮಾತ್ರ ಕೊಡಬೇಕೆನ್ನುವ ದೃಷ್ಟಿಯಿಂದ ಕೇಂದ್ರದವರು ನಮಗೆ ಕೊಡುವ ಕೋಟಾವನ್ನು ಇಳಿಸಿದ್ದಾರೆ. 20 ಸಾವಿರ ಮೆಟ್ರಿಕ್ ಟನ್ ಇದ್ದುದನ್ನು 8600 ಮೆಟ್ರಿಕ್ ಟನ್‌ಗಳಿಗೆ ಇಳಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕುಟುಂಬವೊಂದಕ್ಕೆ ಎರಡು ಕಿಲೋ, ಪಾಗೂ ಪಟ್ಟಣ ಪ್ರದೇಶಗಳಲ್ಲಿ ಮೂರು ಕಿಲೋ ಪ್ರಮಾಣದಲ್ಲಿ ನಾವು ವ್ಯವಸ್ಥೆಯನ್ನು ಆಳವಡಿಸಿದ್ದೇವೆ. ಮುಂದಿನ ತಿಂಗಳು ನಮಗೆ ಎಷ್ಟು ಕೋಟಾ ಬರುತ್ತದೆ ಎಂದು ನೋಡಬೇಕಾಗಿದೆ. ಕೇಂದ್ರ ಸರಕಾರದವರ ಸಕ್ಕರೆ ಹಂಚಿಕೆಯ ನೀತಿಯು ಬದಲಾವಣೆಯಾಗಿರುವುದರಿಂದ ಈ ಪಡಿತರ ವ್ಯವಸ್ಥೆಯು ಎಷ್ಟು ಸಮಯ ಉಳಿಯುತ್ತದೆ ಅಥವಾ ಉಳಿಯುವುದಿಲ್ಲವೆನ್ನುವುದನ್ನು ನಾವು ಹೇಳುವುದಕ್ಕಾಗುವುದಿಲ್ಲ.